೯. ಹಿಂದುಳಿದ ಪಂಗಡಗಳ ಕಲ್ಯಾಣ ಸಮಿತಿ.

Sriyuths :

1) Muttennavar M. L.
2) Basavaraj D.
3) K. Venkatesh
4) Gowda N. H.
5) Kempe Gowda K.

Sriyuths :

6) Mahadevappa Gowli
7) G. M. Kanade
8) Basavaraj Patil
9) Smt. Muktharunnisa

೧೦. ಸೌಕರ್ಯ ಸಮಿತಿ.

Sriyuths :

1) Leeladevi R. Prasad
2) Saler Siddappa
3) Smt. Shivakantha Chature
4) Krishna

Sriyuths :

5) Bheemaneni Kodaiah
6) Blasius M. D'souza
7) Veerkumar A. Patil
8) Veeraiah Swamy

೧೧. ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್

Sriyuths :

1) H. Ekanthaiah
2) E. Nanje Gowda
3) S. D. Jayaram

Sriyuths :

4) Mahadevappa H. C.
5) A. Krishnappa

೧೨. ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್.

Sriyuths :

1) Ajjibal Heggade G. S.
2) R. M. Patil
3) Smt. Shakunthala Chowgule

Sriyuths :

4) M. D. Biradar
5) K. B. Koliwad

೧೩. ಕೃಷಿ ವಿಶ್ವವಿದ್ಯಾನಿಲಯದ ರೀಜೆಂಟ್ಸ್ ಮಂಡಲಿ.

Sriyuths :

1) K. Mallappa
2) D. G. Basavanagowda

Sriyuths :

3) Smt. K. S. Nagarathnamma

ಸಭೆಯನ್ನು ಮುಂದೂಡುವುದಕ್ಕೆ ಮೊದಲು ಮೊದಲನೆಯ ಅಧಿವೇಶನದಲ್ಲಿ ನಡೆಸಲಾದ ಕಾರ್ಯ ಕಲಾಪಗಳ ಸಂಕ್ಷಿಪ್ತ ಪರದಿಯನ್ನು ನಾನು ನೀಡಲಿಚ್ಛಿಸುತ್ತೇನೆ.

ಹೊಸದಾಗಿ ಅಸ್ತಿತ್ವಕ್ಕೆ ಬಂದ ಎಂಟನೇ ವಿಧಾನ ಸಭೆಯ ಮೊದಲನೆಯ ಅಧಿವೇಶನವು ೧೮ನೇ ಮಾರ್ಚ್ ೧೯೬೭ ರಿಂದ ಪ್ರಾರಂಭವಾಯಿತು. ೧೩ ದಿವಸಗಳ ಕಾಲ ಸಭೆ ಸೇರಿತ್ತು.

ಅಧಿವೇಶನದ ಪ್ರಾರಂಭದ ದಿವಸ ೧೭ನೇ ಮಾರ್ಚಿ ೧೯೮೫ ರಂದು ರಾಜಭವನದಲ್ಲಿ ರಾಜ್ಯಪಾಲರ ಸಮ್ಮುಖದಲ್ಲಿ ಹಂಗಾಮಿ ಅಧ್ಯಕ್ಷರಾಗಿ ಪ್ರಮಾಣ ವಚನವನ್ನು ಸ್ವೀಕಾರ ಮಾಡಿದ್ದ ಶ್ರೀ ಜಿ. ಪಾದೇಗೌಡರವರು ಹೊಸದಾಗಿ ಆಯ್ಕೆಗೊಂಡಿದ್ದ ಸದಸ್ಯರುಗಳಿಗೆ ದಿನಾಂಕ ೧೮-೩-೧೯೮೫ ರಂದು ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನ ಬೋಧಿಸಿದರು. ಹೊಸದಾಗಿ ಆಯ್ಕೆಗೊಂಡ ಸದಸ್ಯರುಗಳು ಸದನದಲ್ಲಿ ಕುಳಿತು ಕೊಳ್ಳುವ ಮುನ್ನ ಪ್ರಮಾಣವಚನ ಅಥವಾ ಪ್ರತಿಜ್ಞಾವಚನ ಸ್ವೀಕರಿಸಲು ವಿಧಾನಸಭಾ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್‌ರವರನ್ನೂ ಸಹ ರಾಜ್ಯಪಾಲರು ನೇಮಿಸಿದ್ದರು. ಶ್ರೀ ಎಂ. ಎಸ್. ಕೃಷ್ಣನ್‌ರವರೂ ಸಹ ರಾಜ್ಯಪಾಲರ ಮುಂದೆ ದಿನಾಂಕ ೧೮-೩-೧೯೮೫ ರಂದು ಪ್ರಮಾಣವಚನವನ್ನು ಸ್ವೀಕರಿಸಿದರು.

ಸದನದಲ್ಲಿ ೨೨೧ ಸದಸ್ಯರುಗಳು ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನವನ್ನು ಸ್ವೀಕರಿಸಿದರು. (ನಾಮಕರಣ ಹೊಂದಿದ ಸದಸ್ಯರೊಬ್ಬರನ್ನೊಳಗೊಂಡಂತೆ) ಒಬ್ಬ ಸದಸ್ಯರು ಅಧ್ಯಕ್ಷರ ಕೊಠಡಿಯಲ್ಲಿ ೨ನೇ ಏಪ್ರಿಲ್ ೧೯೮೫ ರಂದು ಪ್ರಮಾಣ ವಚನವನ್ನು ಸ್ವೀಕರಿಸಿದರು.

ಸಭಾಧ್ಯಕ್ಷರ ಸ್ಥಾನಕ್ಕೆ ೧೮-೩-೧೯೮೫ ರಂದು ಅವಿರೋಧವಾಗಿ ಚುನಾವಣೆ ನಡೆಯಿತು.

೧೮ ನೇ ಮಾರ್ಚಿ ೧೯೮೫ ರಂದು ವಿಧಾನ ಸಭೆಯ ಸಭಾಂಗಣದಲ್ಲಿ ಸದಸ್ಯಾವೇಶಗೊಂಡ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಿದರು. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ಶ್ರೀ ವೇದಾಂತ ಹೆಮ್ಮಿಗೆಯವರು ಸೂಚಿಸಿದ ಹಾಗೂ ಶ್ರೀ ವಿಕಾಂತಯ್ಯನವರು ಅನುಮೋದಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಸಭೆಯು ೪ ದಿವಸಗಳ ಕಾಲ ಚರ್ಚೆ ನಡೆಸಿತು ೩೦ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ಮಾನ್ಯ ಮುಖ್ಯಮಂತ್ರಿಗಳು ೧೯೮೫ನೇ ಏಪ್ರಿಲ್ ೬ನೇ ದಿನಾಂಕದಂದು ಚರ್ಚೆಗೆ ಉತ್ತರಿಸಿದರು ಹಾಗೂ ವಂದನಾರ್ಪಣೆಯ ಪ್ರಸ್ತಾವನ್ನು ಅಂಗೀಕರಿಸಲಾಯಿತು.

೧೯೮೫-೮೬ನೇ ಸಾಲಿನ ಆಯುವ್ಯಯ ಅಂದಾಜುಗಳನ್ನು ದಿನಾಂಕ ೧೯೮೫ನೇ ಮಾರ್ಚಿ ೨೧ನೇ ದಿನಾಂಕದಂದು ಸಭೆಯಲ್ಲಿ ಮಂಡಿಸಲಾಯಿತು. ಆಯುವ್ಯಯ ಅಂದಾಜುಗಳ ಮೇಲೆ ಮೂರು ದಿವಸ ಸಾಮಾನ್ಯ ಚರ್ಚೆ ನಡೆಯಿತು ವಿಧಾನಸಭೆಯು ಅರು ತಿಂಗಳುಗಳಿಗೆ ಲೇಖಾನುದಾನ ಆಯುವ್ಯಯವನ್ನು ಅಂಗೀಕರಿಸಿದೆ. ೧೯೮೫-೮೬ನೇ ಸಾಲಿನ ಅನುಪೂರಕ ಅಂದಾಜುಗಳನ್ನು ಅದೇ ದಿವಸ ಸಭೆಯು ಮುಂದಿಡಲಾಯಿತು. ೧೯೮೫-೮೬ನೇ ಸಾಲಿನ ಹಣವಿನಿಯೋಗಕ್ಕೆ ಸಂಬಂಧಿಸಿದ (ಲೇಖಾನುದಾನ) ವಿಧೇಯಕ ಹಾಗೂ ೧೯೮೫-೮೬ನೇ ಸಾಲಿನ ಅನುಪೂರಕ ಅಂದಾಜುಗಳೆರಡನ್ನೂ ಸಭೆಯು ಅಂಗೀಕರಿಸಿತು

ಈ ಅವಧಿಯಲ್ಲಿ ೧೦೪ ಚುಕ್ಕೆ ಗುರುತಿನ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು ಅವುಗಳ ಪೈಕಿ ೪೬ಕ್ಕೆ ಸದನದಲ್ಲಿ ಉತ್ತರಿಸಲಾಗಿದೆ, ಲಿಖಿತ ಮೂಲಕ ಉತ್ತರಿಸಲಾಗುವ ೪೬ ಪ್ರಶ್ನೆಗಳಿಗೆ ಸ್ವೀಕರಿಸಿದ್ದು ಹಾಗೂ ಅವುಗಳಿಗೆ ಉತ್ತರಗಳನ್ನು ಸಭೆಯ ಮುಂದಿಡಲಾಯಿತು.

೩ ಅಲ್ಪಕಾಲಾವಧಿಯ ಪ್ರಶ್ನೆಗಳನ್ನು ಸ್ವೀಕರಿಸಲಾಗಿದ್ದು ಆ ಎಲ್ಲ ಮೂರು ಸೂಚನೆಗಳನ್ನು ಅಂಗೀಕರಿಸಿ ಉತ್ತರಿಸಲಾಯಿತು.

೪೧ ಸದಸ್ಯರುಗಳಿಂದ ಸಾರ್ವಜನಿಕ ಪ್ರಮುಖ ವಿಷಯಗಳಿಗೆ ಸಂಬಂಧಿಸಿದ ೭೬ ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಲಾಯಿತು. ೨೬ ಸೂಚನೆಗಳಿಗೆ ಸಂಬಂಧಪಟ್ಟ ಮಂತ್ರಿಯವರು ಸಭೆಯಲ್ಲಿ ಹೇಳಿಕೆ ಇತ್ತರು.

೩೩ನೇ ನಿಯಮದ ಮೇರೆಗೆ ಸುಮಾರು ೨೦೭ ಸೂಚನೆಗಳನ್ನು ಸ್ವೀಕರಿಸಲಾಯಿತು ಹಾಗೂ ಆ ಪೈಕಿ ೧೮೨ ಸೂಚನೆಗಳನ್ನು ಇತ್ಯರ್ಥಗೊಳಿಸಲಾಯಿತು ೩೩ನೇ ನಿಯಮದ ಮೇರೆಗೆ ಪ್ರಸ್ತಾಪಿಸಿದ ವಿಷಯಗಳಿಗೆ ಉತ್ತರಿಸಲು ಸರ್ಕಾರವು ಬದ್ಧವಲ್ಲದಿದ್ದರೂ ಸಹ ಹೆಚ್ಚಿನ ಪ್ರಕರಣಗಳಲ್ಲಿ ಸಂಬಂಧಪಟ್ಟ ಮಂತ್ರಿಗಳು ಸಭೆಗೆ ಹೇಳಿಕೆಗಳನ್ನು ನೀಡಿದ್ದಾರೆ.

ಎರಡು ನಿಲುವಳಿ ಸೂಚನೆಗಳನ್ನು ಸ್ವೀಕರಿಸಲಾಗಿದ್ದು ಅವುಗಳಲ್ಲಿ ಯಾವುದನ್ನು ಅಂಗೀಕರಿಸಲಿಲ್ಲ ಹಕ್ಕು ಬಾಧ್ಯತೆಗೆ ಸಂಬಂಧಿಸಿದ ೧ ಂದು ಸೂಚನೆಯನ್ನು ಸ್ವೀಕರಿಸಲಾಗಿದ್ದು ಅದಕ್ಕೆ ಒಪ್ಪುಗೆ ನೀಡಿಲ್ಲ.

ನಿಯಮ ೬೮ರ ಮೇರೆಗೆ ಅಲ್ಪ ಕಾಲಾವಧಿಯವರೆಗೆ ಚರ್ಚೆ ನಡೆಸಲು ಮೂರು ಸೂಚನಾ ಪತ್ರಗಳು ಬಂದಿದ್ದು ಆ ಪೈಕಿ ಒಂದನ್ನು ಸದನದಲ್ಲಿ ಚರ್ಚಿಸಲಾಯಿತು. ಒಟ್ಟು ೧೬ ಸರ್ಕಾರಿ ವಿಧೇಯಕಗಳನ್ನು ಮಂಡಿಸಿದ್ದು (ಅಧ್ಯಾದೇಶಗಳನ್ನು ಬದಲಾಯಿಸುವ ೧೦ ವಿಧೇಯಕಗಳೂ ಸೇರಿ) ೧೪ ವಿಧೇಯಕಗಳನ್ನು ಸದನವು ಅಂಗೀಕರಿಸಿದೆ.

ವಿಧಾನ ಪರಿಷತ್ತಿನ ಶಿಫಾರಸಿನ ಮೇರೆಗೆ ಹಿಂದಿರುಗಿಸಿದ ೧೯೮೬ನೇ ಇಸವಿಯ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲಿನ ತೆರಿಗೆ) (ತಿದ್ದುಪಡಿ) ವಿಧೇಯಕವನ್ನು ಸದನವು ಪುನರ್ ಪರಿಶೀಲಿಸಿ ಅಂಗೀಕರಿಸಿದೆ.

೨೪೮ ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು. ಸಭೆಗೆ ಈ ಅವಧಿಯಲ್ಲಿ ೪ ಮನವಿಗಳನ್ನೊಪ್ಪಿಸಲಾಗಿದೆ.

೧೯೮೪ನೇ ಇಸವಿಯ ಸಂವಿಧಾನದ (ಐವತ್ತೂರನೆಯ ತಿದ್ದುಪಡಿ) ವಿಧೇಯಕವನ್ನು ಸ್ವೀಕರಿಸುವ ಒಂದು ಸರ್ಕಾರಿ ನಿರ್ಣಯವನ್ನು ಸದನವು ದಿನಾಂಕ ೨೮-೩-೧೯೮೫ ರಂದು ಅಂಗೀಕರಿಸಿದೆ

ವಿವಿಧ ಸಮಿತಿಗಳಿಗೆ ಕರ್ನಾಟಕ ಹಾಗೂ ಮೈಸೂರು ವಿಶ್ವವಿದ್ಯಾನಿಲಯಗಳ ಸೆನೆಟ್ಟುಗಳಿಗೆ ಹಾಗೂ ಕೃಷಿ ವಿಶ್ವವಿದ್ಯಾನಿಲಯದ ರೀಜಂಟ್ಸ್ ಮಂಡಳಿಗಳಿಗೆ ಸಂಬಂಧಿಸಿದಂತೆ ಚುನಾವಣಾ ಪ್ರಸ್ತಾವಗಳನ್ನು ಮಂಡಿಸಲಾಯಿತು ಹಾಗೂ ವಿವಿಧ ಪಕ್ಷಗಳ ನಾಯಕರು ಒಪ್ಪಿ ಸಲ್ಲಿಸಿದ ಪಟ್ಟಿಯಂತೆ ಸದರಿ ಸಮಿತಿ ಸೆನೆಟ್ ಹಾಗೂ ಮಂಡಳಿಗಳನ್ನು ಪುನರ್ ರಚಿಸಲಾಯಿತು.

ಸಭಾ ನಾಯಕರಿಗೆ ವಿರೋಧ ಪಕ್ಷದ ನಾಯಕರಿಗೆ ಮಾನ್ಯ ಮಂತ್ರಿಗಳಿಗೆ ಎಲ್ಲಾ ಪಕ್ಷಗಳ ನಾಯಕರಿಗೆ ಹಾಗೂ ಮಾನ್ಯ ಸದಸ್ಯರೆಲ್ಲರೂ ನೀಡಿದ ಸಹಕಾರಕ್ಕಾಗಿ ನಾನು ಅವರಿಗೆಲ್ಲಾ ಮನಃ ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೂ ನನಗೆ ಸಹಕಾರ ನೀಡಿದ ಪತ್ರಿಕಾ ಪ್ರತಿನಿಧಿಗಳಿಗೂ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಈಗ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸಭೆಯು ರಾತ್ರಿ ೯-೨೫ಕ್ಕೆ ಮುಕ್ತಾಯವಾಗಿ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು)